ಏಳು ವರ್ಷಗಳು ಹಿಡಿದವು. ಇದರ ಕತೆಯನ್ನು ನನಗೆ ನಾನೇ ಅನೇಕ ಸಲ ಹೇಳಿಕೊಂಡಿದ್ದೇನೆ.

**◆ 'ರೆತ್ ಸಮಾಧಿ'ಯಲ್ಲಿನ ಅಜ್ಜಿ ಯಾವುದರ ಸೂಚಕ? ಕಣ್ಣಿಗೆ ಕಾಣದ ಗಡಿಗಳೆ? ರಾಜಕೀಯವೆ? ಬದುಕಿನ ಅನಿವಾರ್ಯತೆಗಳೆ? ವೈಯಕ್ತಿಕ ನಷ್ಟವೆ?**

ಅದನ್ನು ಓದುಗರಿಗೇ ಬಿಟ್ಟು ಬಿಡುತ್ತೇನೆ. ವೈಯಕ್ತಿಕವಾಗಿ ಹೇಳುವುದಾದರೆ, ಇದರಲ್ಲಿ ನನಗೆ 'ಇದು ಅಥವಾ ಅದು' ಇಲ್ಲವೇ ಇಲ್ಲ.

**◆ ಯಾಕೆ ಈ ಕಾದಂಬರಿಯ ಕಥನ ಗಡಿಗಳ ಕಡೆಗೆ ಹೊರಳುತ್ತದೆ?**

ಬಹುಶಃ ಈ ಪ್ರಶ್ನೆ ಕೇವಲ ಭಾರತ ಹಾಗೂ ಪಾಕಿಸ್ತಾನ ಗಡಿಗಳಿಗೆ ಸಂಬಂಧಿಸಿದ್ದು ಮಾತ್ರ ಅನ್ನಿಸುತ್ತದೆ. ಇದು ಹಾಗಲ್ಲ. ನನ್ನ ಪ್ರಕಾರ ಈ ಕೃತಿ ಎಲ್ಲ ಪ್ರಕಾರಗಳ ಗಡಿಗಳಿಗೆ ಎದುರಾಗಿ ನಿಲ್ಲುತ್ತದೆ. ಈ ಎದುರಾಗಿ ನಿಲ್ಲುವಿಕೆ ಇದ್ದಕ್ಕಿದ್ದಂತೆ ನಡೆಯುವ ಪ್ರಕ್ರಿಯೆ ಅಲ್ಲವೇ ಅಲ್ಲ.

**◆ ಈ ಕೃತಿ ಯಾಕೆ 'ಎಂದೂ ಕೊನೆಗೊಳ್ಳದ ಭಾರತದ ಕಥನ'ವಾಗುತ್ತದೆ?**

ನಾನು ಕೇವಲ ಲೇಖಕಿಯಾಗಿಯೇ ಇದ್ದುಬಿಡುತ್ತೇನೆ. ಓದುಗರ ಹಾಗೂ ವಿಮರ್ಶಕರ ಪ್ರಪಂಚದೊಳಗೆ ನುಸುಳಲಾರೆ.

**◆ ಈ ಕೃತಿಯ ಆರಂಭದ ದಿನಗಳ ಸವಾಲುಗಳು ಹೇಗಿದ್ದವು?**

ಜೀವನ್ಮುಖಿಯಾದ ಸಮಗ್ರತೆ ಬರವಣಿಗೆಗೆ ಮುಖ್ಯವಾಗುತ್ತದೆ. ನಾನು ಯಾವುದೇ ವಿನ್ಯಾಸವನ್ನು ನನ್ನ ಬರಹದ ರಚನೆಯಲ್ಲಿ ಹೇರುವುದಿಲ್ಲ. ಕತೆ, ಹಂದರ, ತಂತ್ರ ಹಾಗೂ ವಿವರಣೆ ಒಂದಕ್ಕೊಂದು ಪೂರಕವಾಗಿ ಬಂದು, ಒಂದು ರಚನೆಯಾಗುತ್ತದೆ.

**◆ ನಿಮ್ಮ ಕೃತಿಗಳ ಇಂಗ್ಲಿಷ್ ಹಾಗೂ ಫ್ರೆಂಚ್ ಅನುವಾದಕಿಯರಾದ ಡೇಸಿ ರಾಕ್‌ವೆಲ್ ಹಾಗೂ ಆನಿ ಮೋಂಟಾಟ್ ಅವರ ಬಗ್ಗೆ ಹೇಳಿ.**

ಅದು ಎರಡು ಬಗೆಯ ಸಂಬಂಧವಾಗಿತ್ತು. ಒಂದೇ ರೀತಿಯದಾಗಿರಲಿಲ್ಲ. ಅವರ ಭಾಷೆ ಹಾಗೂ ವ್ಯಕ್ತಿತ್ವ ಬೇರೆ ಬೇರೆ ರೀತಿಯದಾಗಿತ್ತು. ಆದರೆ, ಹೊಂದಾಣಿಕೆ ಮಾತ್ರ ಅದ್ಭುತವಾಗಿತ್ತು.

**◆ 'ರೆತ್ ಸಮಾಧಿ' ಬೇರೆ ಭಾರತೀಯ ಭಾಷೆಗಳಿಗೆ ಯಾಕೆ ತರ್ಜುಮೆಗೊಂಡಿಲ್ಲ?**

ಇದು ಕುತೂಹಲಕರವಾಗಿದೆ, ವಿಚಿತ್ರವೂ ಆಗಿದೆ. 'ಇಂಟರ್‌ನ್ಯಾಷನಲ್ ಬೂಕರ್ ಪ್ರೈಜ್' ಹಿಂದಿಗೆ ಲಭಿಸಿರುವುದು ದಕ್ಷಿಣ ಏಷ್ಯಾದ ಭಾಷೆಗಳಿಗೆ ಒಂದು ಶುಭ ಸಮಾಚಾರ. ಭಾಷಾಂತರಕಾರರು, ಪ್ರಕಾಶಕರು ಹಾಗೂ ಅದನ್ನು ಪ್ರೋತ್ಸಾಹಿಸುವವರು ಇದರ ಬಗ್ಗೆ ಉತ್ತರಿಸಬೇಕು. ಈ ನಿಟ್ಟಿನಲ್ಲಿ ಯೋಚಿಸಬೇಕಿದೆ.

**◆ ಲೇಖಕಿಯಾಗಿ ನಿಮಗೆ ಯಾವುದರ ಕುರಿತಾಗಿ ಕೃತಜ್ಞತಾ ಭಾವವಿದೆ?**

ಏಕಾಂತದಲ್ಲಿ ಹುಡುಕುತ್ತಾ, ನನಗಾಗಿ ನಾನೇ ಬರೆಯುವುದು ಒಂದು ಖುಷಿ. ಆದರೆ, ಅದು ಹೊರ ಜಗತ್ತಿಗೆ ಮಾರ್ದನಿಸುವಂತಿರಬೇಕು. ಅಂತಹ ಹೊರ ಜಗತ್ತಿನ ಜನರೊಂದಿಗೆ ಬದುಕುವುದು, ಬರೆಯುವುದು ಒಂದು ಕೃತಜ್ಞತಾ ಭಾವವನ್ನು ನನ್ನಲ್ಲಿ ತರುತ್ತದೆ.

**◆ ಹಿಂದಿ ಭಾಷೆಯ ಲೇಖಕಿಯಾಗಿ ದೇಶದೆಲ್ಲೆಡೆ ಹಿಂದಿ ಭಾಷಾ ಹೇರಿಕೆ ಕುರಿತು...**

ನಾನು ಸಾಮಾನ್ಯ ಲೇಖಕಿ. ಹಿಂದಿ ನನ್ನ ಮಾತೃಭಾಷೆ. ವಿವಿಧ ಬಗೆಯ ಭಾಷಾ ಪರಂಪರೆ ಇರಬೇಕು. ಎಲ್ಲಾ ಭಾಷೆಗಳಿಗೆ ಮಹತ್ವವಿದೆ. ನಾನು ಎಲ್ಲ ಭಾಷೆಗಳ ಪ್ರತಿನಿಧಿಯಾಗಲು ಬಯಸುತ್ತೇನೆ. ಭಾಷೆಯ ಕುರಿತಾದ ರಾಜಕೀಯ ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ. ಎಲ್ಲರೂ ಎಲ್ಲ ಭಾಷೆಗಳನ್ನು ಗೌರವಿಸೋಣ, ಸೌಹಾರ್ದವಾಗಿ ಬದುಕೋಣ. ಇದೇ ನನ್ನ ಮನವಿ. ಆದಷ್ಟು ಬೇಗ ಈ ಸಮಸ್ಯೆ ಕೊನೆಗೊಳ್ಳುವ ವಿಶ್ವಾಸ ನನಗಿದೆ.

●